## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 740/2024

**ಸಾಕ್ಷಿಯನ್ನು ದಿಃ 19.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಜೆ.ಎಸ್ .ಎ ವಕೀಲರಿಂದಃ**

ನನ್ನ ಮಗಳಿಗೆ ದಿಃ 04.09.2025 ಕ್ಕೆ 12 ವರ್ಷ ಆಗುತ್ತದೆ. ಮಗನಿಗೆ ದಿಃ15.09. 2025 ಕ್ಕೆ 6 ವರ್ಷವಾಗುತ್ತದೆ. ಮಗಳು 5ನೇ ತರಗತಿ. ಮಗ 1ನೇ ತರಗತಿ ಓದುತ್ತಿದ್ದಾರೆ. ಮಕ್ಕಳು ಹುಟ್ಟಿದ್ದಾಗಿನಿಂದ ಇಲ್ಲಿಯವರೆಗೆ ಅವರ ಪಾಲನೆ ಪೋಷಣೆ ಮತ್ತು ಶಿಕ್ಷಣದ ಖರ್ಚುವೆಚ್ಚವನ್ನು 1ನೇ ಆರೋಪಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಶಾಲೆಯ ಫೀಜ್ ಕಟ್ಟಿದ್ದಾರೆ. ಮಗಳ 3 ಮತ್ತು 4ನೇ ತರಗತಿಯ ಫೀ ಯನ್ನು 1ನೇ ಆರೋಪಿ ಕಟ್ಟಿದ್ದಾರೆ. ಇಲ್ಲಿಯವರೆಗೆ 1ನೇ ಆರೋಪಿ ಮಕ್ಕಳ ಶಾಲಾ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ 3ವರೆ 4 ವರ್ಷಗಳ ನಂತರ ನಾನು ತವರು ಮನೆ ಸೇರಿದೆ. 2 ರಿಂದ 5ನೇ ಆರೋಪಿತರು 1ನೇ ಆರೋಪಿಗೆ ಪ್ರೇರೇಪಿಸುತ್ತಿದ್ದರು ಮತ್ತು ನನ್ನ ಜೊತೆ ಜಗಳವಾಡಲು ಕುಮ್ಮಕ್ಕು ನೀಡುತ್ತಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಪ್ರೇರೇಪಿಸುತ್ತಿದ್ದರು ಮತ್ತು ಕುಮ್ಮಕ್ಕು ನೀಡುತ್ತಿದ್ದರು ಎಂದು ತೋರಿಸಲು ಯಾವುದಾದರೂ ಸಾಕ್ಷ್ಯಧಾರ ಹಾಜರುಪಡಿಸಿದ್ದಿರಾ ಎಂದರೆ ಅದನ್ನು ಹಾಜರುಪಡಿಸಬೇಕೆಂದು ನನಗೆ ಹೇಳಿಲ್ಲ. ನನ್ನ ತವರು ಮನೆ ಮತ್ತು 1ನೇ ಆರೋಪಿಯ ಮನೆ ಎದುರುಬದುರಾಗಿದೆ ಎಂದರೆ ಸರಿ.

ನನ್ನ ತಂದೆ ನಗರಾಭಿವೃದ್ಧಿ ಇಲಾಖೆಯಲ್ಲಿ ಚಾಲಕರಾಗಿದ್ದಾರೆ. ಅವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ಅವರು ರಜಾ ದಿನಗಳಂದು ಮತ್ತು ಹಬ್ಬ ಹರಿದಿನಗಳಂದು ಊರಿಗೆ ಬರುತ್ತಾರೆ. ನನ್ನ ತಾಯಿ ಗೃಹಿಣಿಯಾಗಿದ್ದರು. ಹಿಗ್ಗೆ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ನನ್ನ ತಮ್ಮ ಕ್ಯಾಬ್ ಡ್ರೈವರ್ ಆಗಿದ್ದಾರೆ. ದಿಃ 30.08.2022 ರಂದು ನಾನು ಹೇಳಿದಂತಹ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಬೆಳಿಗ್ಗೆ ಸುಮಾರು 11-45 ರಿಂದ 12-00 ಆಗಿತ್ತು. ನಿಮ್ಮನ್ನು ಯಾರು ಕಾಪಾಡಿದರು ಎಂದರೆ ಗೊತ್ತಿಲ್ಲ. ನನಗೆ ನನ್ನ ತಂದೆ, ತಮ್ಮ ಮತ್ತು 1ನೇ ಆರೋಪಿಯ ಶಬ್ದ ಕೇಳಿತು. ನನಗೆ ಎಚ್ಚರವಾದಾಗ ಕೆಳಗೆ ಇದ್ದೆ. ನನ್ನ ಕುತ್ತಿಗೆಯ ಮೂಳೆಗೆ ಏಟಾಗಿತ್ತು ನನ್ನನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಪೋಲಿಸರಿಗೆ ಕೊಟ್ಟಿದ್ದೇನೆ. ಅಂತಹ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ನನಗೆ ಇದೇ ರೀತಿ ಮಾಡುವುದು ಅಭ್ಯಾಸವಾಗಿದೆ ಎಂದರೆ ಸರಿಯಲ್ಲ.

ನನ್ನ ತಮ್ಮನ ಮದುವೆ 2022 ರಲ್ಲಿ ಆಯಿತು. ಆ ಮದುವೆಗೆ ಆರೋಪಿತರ ಮನೆಯವರನ್ನು ಕರೆದಿದ್ದೆವು. ಆದರೆ ಅವರು ಬರಲಿಲ್ಲ. ನವೆಂಬರ್ 2023 ರಲ್ಲಿ 3ನೇ ಆರೋಪಿಯ ಮದುವೆಯಾಗಿತ್ತು ಎಂದರೆ ಸರಿ. ಅದರಲ್ಲಿ ನೀವು ಭಾಗವಹಿಸಿದ್ದಿರಾ ಎಂದರೆ ನನ್ನನ್ನು ಕರೆದಿರಲಿಲ್ಲ. ಮದುವೆಗೆ ನಾನು ಭಾಗವಹಿಸಿ ಅಲ್ಲಿಯೂ ಕೂಡ ಗಲಾಟೆ ಮಾಡಿ ಆರೋಪಿತರ ವಿರುದ್ಧ ಇಲ್ಲ-ಸಲ್ಲದ ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 26.01.2023 ರಂದು ಸಂಜೆ 7-30 ಗಂಟೆಗೆ ಯಾವ ಕಾರಣಕ್ಕಾಗಿ ಗಲಾಟೆಯಾಯಿತು ಎಂದರೆ ನಾನು ಮಗನನ್ನು ನನ್ನ ತಾಯಿಯ ಜೊತೆ ಬೆಂಗಳೂರಿಗೆ ಕಳುಹಿಸಿದ ಬಗ್ಗೆ ಗಲಾಟೆಯಾಯಿತು. ಆ ಬಗ್ಗೆ 1ನೇ ಆರೋಪಿ ಕೇವಲ ನನ್ನನ್ನು ಕೇಳಿದಾಗ ನಾನೇ ವಿನಾಕಾರಣ ರಾದ್ಧಾಂತ ಮಾಡಿದ್ದೇನೆ ಎಂದರೆ ಸರಿಯಲ್ಲ. ನಂತರ ನವೆಂಬರ್ 2023ರಲ್ಲಿಯೂ ಕೂಡ ನಾನು ಇದೇ ರೀತಿ ಗಲಾಟೆ ಮಾಡಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಾನು ತಾಯಿಯ ಮನೆಯಲ್ಲಿಯೇ ಇರುತ್ತೇನೆ ಎಂದು ಸ್ವತಃ ಹೇಳಿದ್ದರಿಂದ 1ನೇ ಆರೋಪಿ ನನ್ನನ್ನು ತಾಯಿಯ ಮನೆಯಲ್ಲಿ ಬಿಟ್ಟುಬಂದಿದ್ದಾರೆ ಎಂದರೆ ಸರಿಯಲ್ಲ. ಸ್ಥಳಮಹಜರನ್ನು ಮಾರ್ಚ್ 2ನೇ ತಾರೀಖಿನಂದು ಮಾಡಿದ್ದಾರೆ. ಆ ಸಮಯದಲ್ಲಿ ಪೋಲಿಸರು, ನಾನು ಮತ್ತು ಚಾಸಾ-6 ಮತ್ತು 7 ರವರು ಹಾಜರಿದ್ದೆವು. 1ನೇ ಆರೋಪಿಯಮನೆಯಲ್ಲಿ ಸ್ಥಳಮಹಜರು ಮಾಡಿದಾಗ ಸಮಯ 1.30 ರಿಂದ 2.00 ಗಂಟೆಯಾಗಿತ್ತು. ದೇವಸ್ಥಾನದ ಹತ್ತಿರ ಮಹಜರು ಮಾಡಿದಾಗ ಮಧ್ಯಾಹ್ನ 2.30 ರಿಂದ 3.00 ಗಂಟೆಯಾಗಿತ್ತು ಆ ದಿನ ನನ್ನ ತವರು ಮನೆ, ಗಂಡನ ಮನೆ ಮತ್ತು ಮದುವೆಯಾದ ದೇವಸ್ಥಾನದಲ್ಲಿ ಮಹಜರು ಮಾಡಲಾಗಿತ್ತು. ತವರು ಮನೆಯಲ್ಲಿ

ಸ್ಥಳ ಮಹಜರು ಮಾಡಿದಾಗ ಸಮಯ ಮಧ್ಯಾಹ್ನ 2 ರಿಂದ 2.30 ಆಗಿರಬಹುದು. ದೇವಸ್ಥಾನ ಮತ್ತು ತವರು ಮನೆಯ ಹತ್ತಿರ ಮಧ್ಯಾಹ್ನ 2 ರಿಂದ 2–45ರವರೆಗೆ ಸ್ಥಳ ಮಹಜರು ಮಾಡಿದ್ದಾರೆ. ಪೋಲಿಸರು ಠಾಣೆಯಲ್ಲಿ ತಯಾರಿಸಿದ್ದ ಸ್ಥಳ ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳಮಹಜರಿನಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿದೆ. ಪೋಲಿಸರು ಮನೆಯ ಒಳಗೆ ಬಂದು ಮನೆಯನ್ನು ಪರಿಶೀಲಿಸಿದರು. ಸ್ಥಳ ಮಹಜರು ಮಾಡಿದ ಸ್ಥಳ ಪೂರ್ವಕ್ಕೆ ಕೊಟ್ಟಿಗೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಹರೀಶ್ ಎಂಬುವವರ ಮನೆ ಇದೆ. ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–5ರ ಆಮಂತ್ರಣ ಪತ್ರಿಕೆಯನ್ನು ಉಪನೊಂದಣಾಧಿಕಾರಿಗಳ ಮುಂದೆ ವಿವಾಹ ನೋಂದಣೆಗಾಗಿ ಮಾಡಿಸಿದ್ದಾಗಿದೆ. ನಿಪಿ.9ರ ಬಾವಚಿತ್ರವನ್ನು ನಾನೇ ತೆಗೆದಿದ್ದೇನೆ ಎಂದರೆ 1ನೇ ಆರೋಪಿ ಹೊಡೆದಾಗ ನಾನೇ ತೆಗೆದಿದ್ದೇನೆ. ಆಗ ನಾನು 6 ತಿಂಗಳ ಗರ್ಭಿಣಿಯಾಗಿದ್ದೆ. 1ನೇ ಆರೋಪಿಗೆ ಇನ್ನೊಂದು ಸಂಬಂಧ ಇದೆ ಎಂದು ಗೊತ್ತಾಗಿ ಕೇಳಿದಾಗ ಆ ರೀತಿ ಹೊಡೆದಿದ್ದಾರೆ. 1ನೇ ಆರೋಪಿಗೆ ಇನ್ನೊಂದು ಸಂಬಂಧ ಇದೆ ಎಂಬ ಬಗ್ಗೆ ದಾಖಲೆ ಕೊಟ್ಟಿದ್ದಿರಾ ಎಂದರೆ ಪೋಲಿಸರು ಕೇಳಿಲ್ಲ ಆದರೆ ನನ್ನ ಬಳಿ ದಾಖಲೆ ಇದೆ. ನನ್ನ ಇಚ್ಛೆಯಂತೆ 1ನೇ ಆರೋಪಿ ಹೊಸ ಮನೆಯನ್ನು ಕಟ್ಟಿದರೂ ಕೂಡ ನಾನು ಕ್ಷುಲ್ಲಕ ಕಾರಣ ನೀಡಿ ಅಲ್ಲಿಗೆ ಬರದೇ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಈ ರೀತಿಯ ವರ್ತನೆಯಿಂದಾಗಿ ನನ್ನ ಮಾವ ಮೃತಪಟ್ಟರು ಎಂದರೆ ಸರಿಯಲ್ಲ. ಯಾವುದೇ ಸಕಾರಣ ಇಲ್ಲದೇ ಇದ್ದರೂ ಸಹ ಹೆಚ್ಚಿನ ಹಣ ಮತ್ತು ವಿವಾಹ ವಿಚ್ಛೇದನೆ ಪಡೆಯಬೇಕೆಂದು ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನನ್ನು ಮತ್ತು ಮಕ್ಕಳನ್ನು ನಾನು ಮದುವೆಯಾಗಿ ಹೋದ ಮನೆಯಲ್ಲಿ ಚೆನ್ನಾಗಿ ನೋಡಿಕೊಂಡರೆ ಸಾಕು ಎಂದು ನುಡಿಯುತ್ತಾರೆ. ಇಲ್ಲಿಯವರೆಗೂ ಆರೋಪಿತರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರೂ ಸಹ ನಾನು ತವರು ಮನೆಯಲ್ಲಿಯೇ ಉಳಿಯಬೇಕೆಂದು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಈಗಲೂ ಕೂಡ ನನ್ನನ್ನು ಮತ್ತು ಮಕ್ಕಳನ್ನು ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಂಡಲ್ಲಿ ನಾನು ಹೋಗಲು ತಯಾರಿದ್ದೇನೆ ಎಂದು ನುಡಿಯುತ್ತಾರೆ. 1ನೇ ಆರೋಪಿ ನನ್ನ ವರ್ತನೆಯಿಂದ ಬೇಸತ್ತಿದ್ದಾರೆಯೇ

ಹೊರತು ಅವರು ನನ್ನನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಉದ್ದೇಶಪೂರ್ವಕವಾಗಿ ತೊಂದರೆ ಕೊಡಬೇಕೆಂದು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.